ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.**

ಸಂಖ್ಯೆ: ಚಿ.ಕ.ವಿ.ಪ್ರೌ.ಶಾ.ಶಿ.ಕಾ.ವಿ.1/2016-17 ದಿನಾಂಕ:01ನೇ ಜೂನ್ 2016

**ಸುತ್ತೋಲೆ**

**ವಿಷಯ:** ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರು ಕೈಗೊಳ್ಳಬೇಕಾದ ಬೋಧನಾ ಕಾರ್ಯ ಚಟುವಟಿಕೆಗಳು.

**ಉಲ್ಲೇಖ:** ನಿರ್ದೇಶಕರು [ಪ್ರೌಢ ಶಿಕ್ಷಣ], ಇವರ ಸುತ್ತೋಲೆ ಸಂಖ್ಯೆ:ಸಿ4[5]: ಚಿ.ಶಿ.ನೇ:32:2001-02, ದಿನಾಂಕ:08.10.2003.

2] ಸರ್ಕಾರದ ಆದೇಶ ಸಂಖ್ಯೆ:ಇಡಿ:185:ಎಸ್ಇಎಸ್:1996, ದಿ:29.11.1996.

ಮೇಲ್ಕಾಣಿಡ ವಿಷಯಕ್ಕೆ ಸಂಬಂಧಿಸಿದಂತೆ ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಚಿತ್ರಕಲಾ ಶಿಕ್ಷಕರುಗಳು ಕೈಗೊಳ್ಳಬೇಕಾದ ಬೋಧನಾ ಕಾರ್ಯಚಟುವಟಿಕೆಗಳ ಕುರಿತು.

ಡಿ.ಎಸ್.ಇ.ಆರ್.ಟಿ ಯಿಂದ 2012-13ನೇ ಸಾಲಿನಲ್ಲಿ ಎನ್.ಸಿ.ಎಫ್ 2005 ಆಧಾರದ ಮೇಲೆ 01 ರಿಂದ 10ನೇ ತರಗತಿವರೆಗೆ ಪಠ್ಯವಸ್ತು ಸಿದ್ಧಪಡಿಸಲಾಗಿದೆ.

ಡಿ.ಎಸ್.ಇ.ಆರ್.ಟಿ ಯಿಂದ 2015ರಲ್ಲಿ "ಚಿತ್ರ ಸಂಚನ" ಎಂಬ ಚಿತ್ರಕಲಾ ಶಿಕ್ಷಕರ ಕೈಪಿಡಿ ಸಿದ್ಧಪಡಿಸಿ ರಾಜ್ಯದ 1700 ಚಿತ್ರಕಲಾ ಶಿಕ್ಷಕರಿಗೆ "ಚಿತ್ರ ಸಂಚನ" ದ ಕುರಿತು ಐದು ದಿನಗಳ ತರಬೇತಿ ನೀಡಲಾಗಿದೆ.

ಪಠ್ಯವಸ್ತುವಿನಂತೆ ಹಾಗೂ ಚಿತ್ರ ಸಿಂಚನ ಕೈಪಿಡಿಯಲ್ಲಿರುವ ಅಂಶಗಳ ಆಧಾರದಂತೆ [1] ವಾರ್ಷಿಕ ಪಾಠ ಯೋಜನೆ [2] ಪಾಠ ಟಿಪ್ಪಣಿ ತಯಾರಿಸಿ ಪಾಠ ಬೋಧನೆ ಮಾಡುವುದು ಹಾಗೂ [3] ದಿನಚರಿ ಪುಸ್ತಕ [4] ವೈಯಕ್ತಿಕ ಅಂಕ ಪಟ್ಟಿ ಗ್ರೇಡ್ ನಮೂದು ವಹಿ [5] ಚಿತ್ರಕಲಾ ಜ್ಞಾಪನ ಪುಸ್ತಕ [6] ಬೇಡಿಕೆ ಪುಸ್ತಕ [7] ಸ್ಥಿರ ವಸ್ತುಗಳ ಹಾಗೂ ಉಪಯೋಗಿ ವಸ್ತುಗಳ ದಾಸ್ತಾನು ವಹಿ [8] ಸಲಕರಣೆ ವಿವರಣಾ ದಾಖಲೆ ವಹಿ [9] ಚಿತ್ರಕಲಾ ಗ್ರೇಡ್ ಪರೀಕ್ಷಾ ವಿವರ ದಾಖಲೆ ವಹಿ [10] ಚಿತ್ರಕಲಾ ಸ್ಪರ್ಧೆ, ಪ್ರದರ್ಶನ, ಬಹುಮಾನ ವಿತರಣಾ ದಾಖಲೆ ವಹಿ [11] ಸಂದರ್ಶಕರ ಪುಸ್ತಕ [12] ಮಕ್ಕಳ ಚಿತ್ರ ಕೃತಿಗಳ ಸಂಗ್ರಹ ಪುಸ್ತಕ [13] ಸೇವೆಯಲ್ಲಿ ವಿಶೇಷ ಸಾಧಾನೆಯ ವಹಿ [14] ಹೊರಾಂಗಣ ಅಧ್ಯಯನದ ದಾಖಲೆ ವಹಿ. ಈ ಎಲ್ಲಾ ದಾಖಲೆಗಳನ್ನು ನಿರ್ವಹಿಸುವುದು.

ಉಲ್ಲೇಖ [1]ರಂತೆ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಡೆಸುತ್ತಿರುವ ಡ್ರಾಯಿಂಗ್ ಗ್ರೇಡ್ ಪರೀಕ್ಷೆಗೆ ಶಾಲಾ ವಿದ್ಯಾರ್ಥಿಗಳ ಸಂಖ್ಯೆಯ ಕನಿಷ್ಠ 10% ವಿದ್ಯಾರ್ಥಿಗಳನ್ನು ಲೋಯರ್ ಗ್ರೇಡ್ ಅಥವಾ ಹೈಯರ್ ಗ್ರೇಡ್ ಪರೀಕ್ಷೆಗೆ ಖಡ್ಡಾಯವಾಗಿ ಹಾಜರಾಗುವಂತೆ ಮಾಡುವುದು.

10ನೇ ತರಗತಿ ವಿದ್ಯಾರ್ಥಿಗಳಿಗೆ ವಿಶೇಷ ತರಗತಿ ತೆಗೆದುಕೊಂಡು ವಿಜ್ಞಾನದಲ್ಲಿಬರುವ ಚಿತ್ರಗಳು ಹಾಗೂ ಸಮಾಜ ವಿಜ್ಞಾನದಲ್ಲಿರುವ ನಕ್ಷೆ ಹಾಗೂ ರೇಖಾ ಗಣಿತದ ಪ್ರಮೇಯಗಳ ಚಿತ್ರಗಳನ್ನು ಸರಳ ರೂಪದಲ್ಲಿ ಬಿಡಿಸುವಂತೆ ಮಾರ್ಗದರ್ಶನ ನೀಡುವುದು.

ಉಲ್ಲೇಖ [2]ರಂತೆ ಜಿಲ್ಲಾ ಹಾಗೂ ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆಗೆ ಪ್ರತಿ ವರ್ಷ ನೋಂದಣಿ ಶುಲ್ಕವಾಗಿ ಚಿತ್ರಕಲಾ ಶುಲ್ಕದಲ್ಲಿ 20% ಅಂದರೆ ಪ್ರತಿ ವಿದ್ಯಾರ್ಥಿಯಿಂದ ರೂ. 2/- ಗಳನ್ನು ಸಂಬಂಧಿಸಿದ ಆಯುಕ್ತರ ಕಛೇರಿಗೆ ಬ್ಯಾಂಕ್ ಹುಂಡಿಯ ಮೂಲಕ ತಪ್ಪದೇ ಸಲ್ಲಿಸುವುದು ಹಾಗೂ ಚಿತ್ರಕಲಾ ಸ್ಪರ್ಧೆಗೆ ವಿದ್ಯಾರ್ಥಿಗಳು ಭಾಗವಹಿಸುವಂತೆ ಕ್ರಮ ವಹಿಸುವುದು.

ಈ ಮೇಲಿನವುಗಳ ಬಗ್ಗೆ ದಾಖಲೆಗಳನ್ನು ಇಡದಿದ್ದಲ್ಲಿ ಅಂತಹವರ ಮೇಲೆ ಇಲಾಖಾ ನಿಯಮಾನುಸಾರ ಶಿಸ್ತಿನ ಕ್ರಮ ಜರುಗಿಸಲಾಗುವುದು.

ನಿರ್ದೇಶಕರು [ಪ್ರೌಢ ಶಿಕ್ಷಣ]

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲ್ಬುರ್ಗಿರವರ ಮಾಹಿತಿಗಾಗಿ
2. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ನಂ. 4, 100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು-560 085
3. ಸಹ ನಿರ್ದೇಶಕರು, ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಕಲಬುರ್ಗಿರವರಿಗೆ
4. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರುಗಳಿಗೆ ಸೂಕ್ತ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರುಗಳಿಗೆ ಸೂಕ್ತ ಕ್ರಮಕ್ಕಾಗಿ.
6. ಕಛೇರಿ ಪ್ರತಿ.

ಪೂರ್ಣಿಮ. \\Typing3server\e\D\Drawing\124-2016.doc